**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಚಿಕ್ಕೋಡಿ**

**ಎಸ್ ಸಿ ನಂ. 107/2016**

ಸಿಡಬ್ಲ್ಯು 1 ಪಿಡಬ್ಲ್ಯು- 2

ದಿನಾಂಕಃ 25.04.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪೂರ್ಣ ಹೆಸರು : ಮಂಜುನಾಥ ಬಾಬಾಸಾಬ ಯಮಗರ್ಣಿ

ವಯಸ್ಸು : 25 ವರ್ಷ

ಉದ್ಯೋಗ : ಚಾಲಕ

ವಾಸ ಸ್ಥಳ : ಗಳತಗಾ

<u>**ಮುಖ್ಯ ವಿಚಾರಣೆಃ-**</u> ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ಚಾಸಾ-7 ನನ್ನ ತಾಯಿ. ಚಾಸಾ-8 ರಿಂದ 13 ನನ್ನ ಸಂಬಂಧಿಕರು. ಮೃತ ಬಾಲಕೃಷ್ಣ ನನ್ನ ತಾಯಿಯ ತಂದೆ. 8 ವರ್ಷದ ಹಿಂದೆ ನಮ್ಮ ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು. ಅದರಲ್ಲಿ ನನ್ನ ಬಾಲಕೃಷ್ಣ ತೀರಿಕೊಂಡಿದ್ದಾನೆ. 30.12.2014 ರಂದು ಸಂಜೆ 06.30 ಗಂಟೆಗೆ ನಮ್ಮ ಮನೆ ಹಿಂದಿರುವ ಆಲದ ಕಳ್ಳಿಯಲ್ಲಿ ಜೇನುಗುಡೂ ಇದ್ದಿದ್ದನ್ನು ಬಿಡಿಸಲು ಹೋಗಿದ್ದೆ. ಆಗ 2 ನೇ ಆರೋಪಿಯ ಹೆಂಡತಿ ಮೂತ್ರ ವಿಸರ್ಜನೆ ಮಾಡುವುದನ್ನು ನಾನು ನೋಡಿರುತ್ತೇನೆ ಎಂದು 2 ಮತ್ತು 5 ನೇ ಆರೋಪಿತರು ನನ್ನ ಮನೆಗೆ ಬಂದು ಬೋಸಡಿ ಮಗನೆ ಹಾದರಗಿತ್ತಿ ಮಗನೆ ಅಂತಾ ಬೈದು ಕಟ್ಟಿಗೆಯಿಂದ ಬಡಿದು ಹೋದರು. ಆ ವಿಷಯ

ನನ್ನ ಅಜ್ಜ ಮೃತ ಬಾಲಕೃಷ್ಣ ಮತ್ತು ನನ್ನ ಮಾಮಂದಿರಿಗೆ ತಿಳಿಸಿದೆ. ಬೆಳಿಗ್ಗೆ ಕೇಳೋಣ ಎಂದು ಹೇಳಿದರು. 31.12.2014 ರಂದು ಬೆ.10.30 ಗಂಟೆಗೆ 2 ಮತ್ತು 5 ನೇ ಆರೋಪಿತರು ನಮ್ಮ ಮನೆಯ ಹಿಂದೆ ಹೋಗುತ್ತಿದ್ದರು. ಆಗ ಮೃತ ಬಾಲಕೃಷ್ಣ ಮತ್ತು ನನ್ನ ಮಾವಂದಿರು ಆ ಜಗಳದ ಬಗ್ಗೆ ಕೇಳಿದರು. ಆಗ ನಿನ್ನೇ ಉಳಕೊಂಡಿರಿ ಈಗ ಎಲ್ಲಾರು ಬರ್ರಿ ಅಂತಾ ಹೇಳಿ ಬೋಸಡಿ ಮಕ್ಕಳಿರಾ ಹಡಸುನ ಮಕ್ಕಳಿರಾ ಅಂತಾ ಬೈದು ನಿಮ್ಮನ್ನು ಯಾರನ್ನೂ ಉಳಿಸುವುದಿಲ್ಲ ಅಂತಾ ಹೇಳಿ ಕಲ್ಲು ಬಡಿಗೆ ತಗೊಂಡು ಬಂದು 3 ಮತ್ತು 6 ನೇ ಆರೋಪಿತರು ಕಟ್ಟಿಗೆಯಿಂದ ಬಾಲಕೃಷ್ಣನ ತಲೆಗೆ ಹೊಡೆದರು ಅದರಿಂದ ಅವರು ಕೆಳಗೆ ಬಿದ್ದು ತಲೆಯಿಂದ ರಕ್ತ ಗಾಯ ಆಗಿದ್ದರೂ 2, 3, 10 ಮತ್ತು 5 ನೇ ಆರೋಪಿತರು ಆತನಿಗೆ ಕಟ್ಟಿಗೆಯಿಂದ ಹೊಡೆಯುತ್ತಿದ್ದರು. ಚಾಸಾ-10 ಬಿಡಿಸಲು ಹೋದಾಗ 1 ಮತ್ತು 4 ನೇ ಆರೋಪಿತರು ಅವರಿಗೂ ಕಟ್ಟಿಗೆಯಿಂದ ತಲೆಗೆ ಬಡಿದು ರಕ್ತ ಗಾಯಪಡಿಸಿದರು. ಬಿಡಿಸಲು ಬಂದ ಚಾಸಾ-11 ರಿಗೂ 2, 5 ಮತ್ತು 7 ನೇ ಆರೋಪಿತರು ಕಟ್ಟಿಗೆಯಿಂದ ಮೈ ಕೈಗೆ ಬಡಿದರು. ಬಿಡಿಸಲು ಬಂದ ಚಾಸಾ-12 ರಿಗೂ 6 ರಿಂದ 8 ನೇ ಆರೋಪಿತರು ಕಟ್ಟಿಗೆಯಿಂದ ಮೈಕೈಗೆ ಹೊಡೆದರು. ಆರೋಪಿತರು ಕೊಲೆ ಮಾಡುವ ಉದ್ದೇಶದಿಂದ ಕಟ್ಟಿಗೆಯಿಂದ ಹೊಡೆದರು. ಚಾಸಾ-8 ನೀರು ತಗೊಂಡು ಬರುತ್ತಿದ್ದಾಗ 8 ನೇ ಆರೋಪಿ ಮಲ್ಲಿಕಾರ್ಜುನ ಮತ್ತು ಮಾರುತಿ

ಮಲ್ಲಪ್ಪ ಕೋಷ್ಟಿ ಇವರು ನಾವು ಕೊಲ್ಲಲು ಬಂದೇವಿ ನಿನ್ಯಾಕ ನೀರು ಹಾಕಿ ಉಳಿಸುತ್ತಿ ಎಂದು ಹೇಳಿ ಅವಳಿಗೆ ಒದ್ದರು. 6 ನೇ ಆರೋಪಿ ಕಟ್ಟಿಗೆಯಿಂದ ಅವಳ ಬೆನ್ನಿಗೆ ಹೊಡೆದ. ಬಿಡಿಸಲು ಹೋದ ನನಗೆ ಬೆನ್ನು ಹತ್ತಿ ಬಡಿಯಲು ಬಂದರು. ಚಾಸಾ-7 ಬಿಡಿಸಲು ಬಂದಾಗ ಆರೋಪಿ ಶಂಕರ ಶಿವಾಜಿ ಕೋಷ್ಟಿ ಬಡಿಗೆಯಿಂದ ಚಾಸಾ-7 ರ ಎರಡು ಕೈಗೆ ಹೊಡೆದ. ಆ ಬಡಿಗೆಯಲ್ಲಿ ಮೊಳೆಗಳು ಇದ್ದವು ಅವು ನನ್ನ ತಾಯಿ ಕೈಗಳಿಗೆ ನೆಟ್ಟು ಗಾಯ ಆಯಿತು. ಚಾಸಾ-11 ಮತ್ತು 12 ಮುಗಳಿಗೇಟ ಹತ್ತಿರ ಇರುವ ದವಾಖಾನೆಗೆ ತಗೊಂಡು ಹೋದರು. ನನ್ನ ಅಜ್ಜ ಬಿದ್ದಿದ್ದನ್ನು ನೋಡಿ ಆರೋಪಿತರು ತಮ್ಮ ಮನೆಯ ಕಡೆ ಹೋದರು. ಚಾಸಾ-10 ಮನೆಯಲ್ಲಿ ರಕ್ತ ಸ್ರಾವ ಆಗಿ ಬಿದ್ದಿದ್ದ. ಆತನನ್ನು ಚಾಸಾ-13 ರ ಮನೆಗೆ ಕರೆದುಕೊಂಡು ಹೋದೇವು. ಆರೋಪಿತರು ವಾಪಸ ಬಂದು ಚಾಸಾ-13 ರ ಮನೆಯ ಬಾಗಿಲ ಕೆಡವಿ ಎಲ್ಲರನ್ನು ಕಾಯುವುದು ಬೇಡ ಅಂತಾ ಹೇಳಿ 2 ನೇ ಬಾಗಿಲು ಕೆಡವಲು ಬಂದಾಗ ನಾವು 2 ನೇ ಬಾಗಿಲು ಹಾಕಿಕೊಂಡು ಒಳಗೆ ಉಳಿದೇವು. ಅದಾದ ನಂತರ ಚಾಸಾ-13 ರ ಮನೆಯ ಮೇಲೆ ಕಲ್ಲು ಒಗೆದರು. ಮೃತ ಬಾಲಕೃಷ್ಣ ಮನೆಯ ಬಾಗಿಲ ಕೂಡಾ ಮುರಿದರು. ನಂತರ 108 ಅಂಬುಲೇನ್ಸ ತರಿಸಿ ಚಾಸಾ-10 ರನ್ನು ಚಿಕ್ಕೋಡಿ ಸರಕಾರಿ ದವಾಖಾನೆಗೆ ಕಳುಹಿಸುವಾಗ ಪಿಎಸಐ ರವರು ಬಂದಿದ್ದರು. ಅವರ ಎದುರಿಗೆ ದವಾಖಾನೆಗೆ

ಕಳುಹಿಸಿದೇವು. ನಂತರ ಪಿಎಸಐ ರವರು ನನಗೆ ಚಿಕ್ಕೋಡಿಗೆ ಕರೆತಂದರು. ಅಲ್ಲಿ ಮ.12-01 ಗಂಟೆ ಸಮಯದಲ್ಲಿ ಫಿರ್ಯಾದಿ ಕೊಟ್ಟೆ ಆ ಫಿರ್ಯಾದಿ ಈಗ ನೋಡಿದೆ ಅದರ ಮೇಲೆ ನನ್ನ ಸಹಿ ಇದೆ. ಇದನ್ನು ನಿಪಿ-4 ಸಾಕ್ಷಿ ಸಹಿ ನಿಪಿ-4(ಎ) ಎಂದು ಗುರುತಿಸಲಾಯಿತು. ಬಾಲಕೃಷ್ಣ ಬೆಳಗಾವಿ ಲೆಕ್ಯೂ ಆಸ್ಪತ್ರೆಯಲ್ಲಿ 11 ನೇ ದಿನಕ್ಕೆ ತೀರಿಕೊಂಡರು. ಆರೋಪಿತರು ಉಪಯೋಗಿಸಿದ 9 ಬಡಿಗೆಗಳನ್ನು ಈಗ ನೋಡಿದೆ. ಸಾಕ್ಷಿ ಗುರುತಿಸಿದ್ದರಿಂದ 3 ಬಿದಿರಿನ ಬಡಿಗೆಗಳನ್ನು ಮು.ಮಾ1 ರಿಂದ 3 ಎಂದು ಮತ್ತು 6 ಕಾಡು ಕಟ್ಟಿಗೆಗಳನ್ನು ಮು.ಮಾ4 ರಿಂದ 9 ಎಂದು ಗುರುತಿಸಲಾಯಿತು. 5 ಹಿಡಿ ಗಾತ್ರದ ಕಲ್ಲುಗಳನ್ನು ನೋಡಿದೆ ಸಾಕ್ಷಿ ಗುರುತಿಸುತ್ತಾರೆ. ಇವುಗಳನ್ನು ಮು.ಮಾ10 ರಿಂದ 14 ಎಂದು ಗುರುತಿಸಲಾಯಿತು. ಘಟನಾ ಸ್ಥಳದಿಂದ ರಕ್ತ ಹತ್ತಿದ ಸ್ವಲ್ಪ ಮಣ್ಣನ್ನು ಮತ್ತು ಸಾದಾ ಮಣ್ಣನ್ನು ಕೂಡಾ ಜಪ್ತಿ ಮಾಡಿದರು. ಅವುಗಳನ್ನು ಈಗ ಸಾಕ್ಷಿ ನೋಡಿ ಗುರುತಿಸುತ್ತಾರೆ. ರಕ್ತ ಮಿಶ್ರಿತ ಮಣ್ಣನ್ನು ಮು.ಮಾ15 ಮತ್ತು ಸಾದಾಮಣ್ಣನ್ನು ಮುಮಾ16 ಎಂದು ಗುರುತಿಸಲಾಯಿತು. ಈಗ ನೋಡಿದ ಖಾಕಿ ಬಣ್ಣದ ಹಾಫ ತೋಳಿನ ಶರ್ಟ ಮತ್ತು ಕಾಟನ ಮುಂಡಾ ನನ್ನ ಅಜ್ಜ ಬಾಲಕೃಷ್ಣನದ್ದು ಇವೆ. ಇವುಗಳನ್ನು ಮು.ಮಾ17 ಮತ್ತು 18 ಎಂದು ಗುರುತಿಸಲಾಯಿತು. ಒಂದು ಕ್ರಿಂ ಬಣ್ಣದ ಪುಲ ತೋಳಿನ ಶರ್ಟ, ಬಿಳಿ ಬಣ್ಣದ ಹಾಫ ಬನಿಯನ್ , ಚಾಕಲೇಟ ಕಲರ

ಪ್ಯಾಂಟ ನೋಡಿದೆ ಇವು ಚಾಸಾ-10 ರದ್ದು ಇವೆ. ಇವುಗಳನ್ನು ಅನುಕ್ರಮವಾಗಿ ಮು.ಮಾ19 ರಿಂದ 21 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ-** ಆರೋಪಿ ಪರ ಶ್ರೀ ಎಸ್.ಎನ್.ಪಿ ವಕೀಲರಿಂದಃ-

ಘಟನೆ ಆದ ದಿನದಂದು ನನಗೆ 17 ವರ್ಷ ವಯಸ್ಸಾಗಿತ್ತು. ಆವಾಗ ನಾನು ಪಿಯುಸಿ ಪ್ರಥಮ ವರ್ಷ ಯಾದಗೂಡದಲ್ಲಿ ಓದುತ್ತಿದ್ದೆ. ಅಲ್ಲಿಂದ ಕಮತೆನಟ್ಟಿ 3 ಕಿ.ಮಿ. ಇದೆ. ಆದರೆ ನಮ್ಮ ತೋಟದ ಮನೆಯಿಂದ ಒಂದುವರೆ ಕಿ.ಮಿ. ದೂರ ಇದೆ. ನಮ್ಮ ಮನೆ ಗಳತಗಾದಲ್ಲಿ ಇದೆ. ಅದು ಕಮತೆನಟ್ಟಿಯಿಂದ 40 ಕಿ.ಮಿ. ದೂರ ಇದೆ. ನಾನು 3 ವರ್ಷದವನಿದ್ದಾಗಿನಿಂದ ಕಮತೆನಟ್ಟಿಯಲ್ಲಿ ಇದ್ದೇನೆ. ನನ್ನ ತಾಯಿ ಅಲ್ಲಿಗೆ ಕೆಲವೊಮ್ಮೆ ಬಂದು ಹೋಗುತ್ತಾರೆ. 2002 ರಲ್ಲಿ ನನ್ನ ತಂದೆ ತೀರಿಕೊಂಡಿದ್ದಾರೆ. ನಮ್ಮ ಮನೆಯ ಹಿಂದೆ ಇರುವ ಆಲಸ ಗಿಡದಲ್ಲಿ ಜೇನುಗೂಡ ಇತ್ತು. ನಾನು ಜೇನು ಬಿಡಿಸಿದೆ. ಜೇನು ಬಿಡಿಸಲು ಸಂಜೆ 06.30 ಗಂಟೆಗೆ ಹೋಗಿದ್ದೆ.ಅಲ್ಲಿ 5 ನಿಮಿಷದಲ್ಲಿ ಆರೋಪಿತರು ಬಂದರು.ಆ ಸಮಯದಲ್ಲಿ ಮನೆಯಲ್ಲಿ ನಾನೊಬ್ಬನೆ ಇದ್ದೆ. ಉಳಿದ ನಮ್ಮ ಮನೆಯವರು ಹೊಲಕ್ಕೆ ಹೋಗಿದ್ದರು.

2) ಮೊದಲಿನ ಬಾರಿ ನನಗೆ ಹೊಡೆದಾಗ ಕೈಗೆ ಮತ್ತು ಕಪಾಳಕ್ಕೆ ಬಾಸುಂಡೆ ಬಂದಿತ್ತು. ನಾನು ಚಿಕಿತ್ಸೆ ಪಡೆಯಲಿಲ್ಲ. ನನಗೆ ಮೊದಲಿನ ಬಾರಿ ಹೊಡೆದಾಗ ನಮ್ಮ

ಮನೆಯವರು ಇರಲಿಲ್ಲ. ಸಂಜೆ 07 ಗಂಟೆಗೆ ನಮ್ಮ ಮನೆಯವರು ಮನೆಗೆ ಬಂದಾಗ ಘಟನೆ ಬಗ್ಗೆ ಹೇಳಿದೆ. ನನಗೆ ಆದ ಬಾಸುಂಡೆ ಗಾಯ ಮೃತ ಬಾಲಕೃಷ್ಣ,ಚಾಸಾ-7 ರಿಂದ 12 ರಿಗೆ ತೋರಿಸಿದೆ.ಮರುದಿನ ಬೆಳಿಗ್ಗೆ ಅಂದಾಜು 10 ಗಂಟೆಗೆ ಜಗಳ ಆಯಿತು.ಆ ಜಗಳ ಅರ್ದ ಗಂಟೆಯವರೆಗೆ ನಡೆಯಿತು. ಅಲ್ಲಿ ಪಿಎಸಐ ಬಂದಾಗ ಬೆಳಿಗ್ಗೆ 11 ಗಂಟೆ ಆಗಿತ್ತು. ಅವರ ಜೊತೆ ಸಿಬ್ಬಂದಿ ಇದ್ದರು. ಕಮತೆನಟ್ಟಿಯಿಂದ ಚಿಕ್ಕೋಡಿ 15 ಕಿ.ಮಿ. ದೂರ ಇದೆ. ಮೊಟ್ಟ ಮೊದಲು ಪೋಲಿಸರಿಗೆ ಯಾರು ಹೇಗೆ ತಿಳಿಸಿದರು ಅನ್ನುವುದು ಗೊತ್ತಿಲ್ಲ.45 ನಿಮಿಷದವರೆಗೆ ಪಿಎಸಐ ಜಾಗೆಯ ಮೇಲೆ ಇದ್ದರು.ಪಿಎಸಐ ರವರು ಬಂದ ಕೂಡಲೇ ಆರೋಪಿತರು ಓಡಿ ಹೋದರು. ಪಿಎಸಐ ಬರುವ ಮೊದಲು ಚಾಸಾ-11 ಮತ್ತು 12 ಬಾಳಕೃಷ್ಣನಿಗೆ ಆಸ್ಪತ್ರೆಗೆ ಕಳುಹಿಸಿದ್ದರು. ಆಗ ಬಾಳಕೃಷ್ಣ ಪ್ರಜ್ಞಾಹೀನರಾಗಿದ್ದರು. ಪಿಎಸಐ ಬಂದಾಗ ಚಾಸಾ-8, 10, ನಾನು, ಚಾಸಾ-9 ಇದ್ದರು. ಆಗ ನಾನು ಅಪ್ಪಣ್ಣ ಕೋಷ್ಟಿ ಇವರ ಮನೆಯಲ್ಲಿ ಇದ್ದೆ.ಪಿಎಸಐ ರವರು ಚಾಸಾ7, 8 ಮತ್ತು 10 ರನ್ನು ಆಸ್ಪತ್ರೆಗೆ ಕಳುಹಿಸಿದ್ದರು. ಮ.12 ರ ಅವಧಿಯಿಂದ 12.30 ರ ಅವದಿಯಲ್ಲಿ ನನಗೆ ಚಿಕ್ಕೋಡಿ ಪೋಲಿಸ ಠಾಣೆಗೆ ಕರೆತಂದರು. ಅವರ ಹೆಸರು ಸಂಗಮೇಶ ದಿಡಿಗಿನಾಳ ಅಂತಾ ಇದೆ. ನಾನೇ ಸ್ವತಃ ಫಿರ್ಯಾದಿ ಬರೆದೆ. ಅಲ್ಲಿ ನನ್ನ ಜೊತೆ ಚಾಸಾ-7 ಇದ್ದರು. ಆ ಮೊದಲು ಅವರು ದವಾಖಾನೆಯಲ್ಲಿ ಚಿಕಿತ್ಸೆ ಪಡೆದು

ಬಂದಿದ್ದರು. ನನಗೆ ಗೊತ್ತಿರುವ ವಿಷಯದ ಬಗ್ಗೆ ಫಿರ್ಯಾದಿ ನಾನೇ ಬರೆದೆ. ಘಟನೆ ಆಗಿದ್ದರಿಂದ ಕೆಲವು ವಿಷಯ ನನಗೆ ಮರೆತು ಹೋಗಿದ್ದರಿಂದ ಫಿರ್ಯಾದಿ ಬರೆಯುವಾಗ ಅವುಗಳನ್ನು ಬರೆಯಲು ಆಗಲಿಲ್ಲ.

3) ಫಿರ್ಯಾದಿ ಕೊಟ್ಟಾಗ ಮ.01.30 ಗಂಟೆ ಆಗಿತ್ತು.2-3 ದಿವಸದ ನಂತರ ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದರು. ಆವಾಗ ಪೋಲಿಸರು ನನ್ನ ಸಹಿ ಪಡೆದರು. ಅಲ್ಲಿವರೆಗೆ ಬಡಿಗೆ ಮತ್ತು ಕಲ್ಲುಗಳು ಜಾಗಾದಲ್ಲಿ ಬಿದ್ದಿದ್ದವು. ಸಾಕ್ಷಿ ಪೋಲಿಸ ಸೆಕ್ಯೂರಿಟಿ ಇತ್ತು ಎಂದು ಮತ್ತು ಪೋಲಿಸ ವ್ಯಾನ ಇತ್ತು ಎಂದು ಸ್ವತಃ ಹೇಳುತ್ತಾರೆ. ನಾನು 9 ಮಂದಿ ಮೇಲೆ ಫಿರ್ಯಾದಿ ಕೊಟ್ಟಿದ್ದೇನೆ. ಅವರ ಹೆಸರು ಹೊರತು ಪಡಿಸಿ ಬೇರೆಯವರ ಹೆಸರು ಕೂಡಾ ಬರೆದಿದ್ದೇನೆ. ಅವರ ಹೆಸರು ಚಂದ್ರಕಾಂತ ಮಾರುತಿ ಕೋಷ್ಟಿ ರಾಜಶ್ರೀ ಮಲ್ಲಪ್ಪ ಕೋಷ್ಟಿ , ಮಹಾದೇವಿ ಚಂದ್ರಕಾಂತ ಕೋಷ್ಟಿ ಮತ್ತು ಮಹಾದೇವಿ ಈರಪ್ಪ ಕೋಷ್ಟಿ ಇದೆ. ಈ ನಾಲ್ಕು ಜನ ನ್ಯಾಯಾಲಯದ ಮುಂದೆ ಇಲ್ಲಾ ಅನ್ನುವುದು ನಿಜ.2 ಮತ್ತು 3 ನೇ ಆರೋಪಿತರು ಮೊದಲನೇ ದಿನ ನನಗೆ ಬೋಸಡಿ ಮಗನೆ ಹಾದರಗಿತ್ತಿ ಮಗನೆ ಅಂತಾ ಬೈದಿದ್ದ ಬಗ್ಗೆ ಕಟ್ಟಿಗೆಯಿಂದ ಹೊಡೆದ ಬಗ್ಗೆ ಫಿರ್ಯಾದಿಯಲ್ಲಿ ಬರೆದಿಲ್ಲ ಅನ್ನುವುದು ಸರಿಯಲ್ಲ.ನಿನ್ನೇ ಉಳಿದುಕೊಂಡಿರಿ ಈಗ ಎಲ್ಲರೂ ಬರ್ರಿ ಅಂತಾ ಬೋಸಡಿ ಮಕ್ಕಳಿರಾ ಹಡಸುನ ಮಕ್ಕಳಿರಾ ಅಂತಾ ಬೈದು ನಿಮ್ಮನ್ನು ಉಳಿಸುವುದಿಲ್ಲ

ಎಂದು ಕಲ್ಲು ಬಡಿಗೆ ತಂದು 3 ಮತ್ತು 6 ನೇ ಆರೋಪಿತರು ಬಾಳಕೃಷ್ಣನ ತಲೆಗೆ ಹೊಡೆದರು ಎಂಬ ವಿಷಯ ಫಿರ್ಯಾದಿಯಲ್ಲಿ ಬರೆದಿಲ್ಲ ಅನ್ನುವುದು ಸರಿಯಲ್ಲ. ಈ ಎರಡು ವಿಷಯಗಳ ಬಗ್ಗೆ ನಾನು ಪೋಲಿಸರ ಮುಂದೆ ಮರುಹೇಳಿಕೆ ಕೊಟ್ಟಿಲ್ಲ. ಪೋಲಿಸರು ನನ್ನ ಪುರವಣಿ ಹೇಳಿಕೆ ಪಡೆದಿಲ್ಲ.

4)ಆ ದಿನ ನಮ್ಮ 7 ಜನರ ಮೇಲೆ ಆರೋಪಿತರು ಕಂಪ್ಲೆಂಟ ಮಾಡಿದ್ದಾರೆ ಅನ್ನುವುದು ನಿಜ. ಆ ಕೇಸ ಈ ಕೋರ್ಟನಲ್ಲಿ ಚಾಲ್ತಿ ಇದೆ ಅನ್ನುವುದು ನಿಜ. ಆಕೇಸಿನಲ್ಲಿ ನಾನು ಕೂಡಾ ಆರೋಪಿ ಇದ್ದೇನೆ ಅನ್ನುವುದು ನಿಜ. ಆ ಕೇಸಿನಲ್ಲಿ ಎಷ್ಟು ಜನರು ದುಃಖಾಪತಿ ಇದ್ದಾರೆ ಅನ್ನುವುದು ಗೊತ್ತಿಲ್ಲ. 10.01.2015 ರಂದು ಬಾಳಕೃಷ್ಣ ತೀರಿಕೊಂಡರು. ದಿಃ31.12.2014 ರಂದು ರಾತ್ರಿ 10.30 ಗಂಟೆಗೆ ಘಟನೆ ಆಗಿದೆ ಎಂದು ಪೋಲಿಸರ ಮುಂದೆ ಪುನರ ಹೇಳಿಕೆ ಕೊಟ್ಟಿದ್ದೇನೆ ಅನ್ನುವುದು ಸರಿಯಲ್ಲ. ಸದರಿ ಹೇಳಿಕೆಯನ್ನು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು. 31.12.2014 ರಂದು ಘಟನೆ ಆಗಿದೆ ಎಂದು ಹೇಳಲಾದ ಸ್ಥಳದಲ್ಲಿ ನಾನು ಇರಲಿಲ್ಲ ಅನ್ನುವುದು ಸರಿಯಲ್ಲ. ನಮ್ಮ ಮನೆಯವರ ಮಾತು ಕೇಳಿ ಸುಳ್ಳು ಫಿರ್ಯಾದಿ ಕೊಟ್ಟಿದ್ದೇನೆ ಅನ್ನುವುದು ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು

ಸಮಯ ಕೇಳಿದ್ದರಿಂದ ಆಲಿಸಿ ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ
ಮಾಡಲಾಯಿತು.)

(ಸಾಕ್ಷಿಗೆ ಓ, ಹೇ, ಕೆ, ಸರಿ ಇದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.